ವಿಜಯ ಕರ್ನಾಟಕ

# ಸ್ವರ ಲಯ ಸಾಮ್ರಾಟ ಪ್ರಶಸ್ತಿ ಪ್ರದಾನ

ಶಾಸ್ತ್ರೀಯ ಸಂಗೀತವನ್ನು ಆಸಕ್ತಿಯಿಂದ ಅಭ್ಯಾಸ ಮಾಡುತ್ತಿರುವ ಯುವಜನರ ಸಂಖ್ಯೆ ಹೆಚ್ಚುತ್ತಿದೆ. ಅಲ್ಲದೇ ಭಾರತೀಯ ಸಂಸ್ಕೃತಿ ಮತ್ತು ಕಲೆ ಉಳಿಸಲು ಸಾಕಷ್ಟು ಮಂದಿ ಶ್ರಮಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಸಂಗೀತ ವಿದ್ವಾಂಸ ಪಂಡಿತ್ ಎಂ.ವೆಂಕಟೇಶ ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಆರ್ಟಿಸೆನ್ಸ್ ಸಂಸ್ಥೆಯು ಫೈನಲ್ ಕಟ್ ಪ್ರೊಡಕ್ಷನ್ ಹಾಗೂ ಜೈನ ವಿವಿಯ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಸ್ಟಡೀಸ್ ಶಾಲೆಯ ಸಹಯೋಗದಲ್ಲಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸ್ವರಾರೋಹಣ-2014' ಕಾರ್ಯಕ್ರಮದಲ್ಲಿ 'ಸ್ವರ ಲಯ ಸಾಮ್ರಾಟ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಆರ್ಟಿಸೆನ್ಸ್ ಸಂಸ್ಥೆಯನ್ನು ಉದ್ಘಾಟಿಸಲಾಯಿತು. ಲೇಖಕಿ ಡಾ. ವಿಜಯಾ, ಡಾ. ಬಿ.ಎ.ವಾಸು, ಡಾ. ಬಿ.ಟಿ. ವೆಂಕಟೇಶ್, ಹಾಸ್ಯ ಸಾಹಿತಿ ಎಂ.ಎಸ್.ನರಸಿಂಹಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.